ಅವಳ ಕಣ್ಣಲ್ಲಿ ನೀರು ತುಂಬಿ ತೊನೆಯುತ್ತಿದ್ದವು. ಹೊರಗೆ ಕಟ್ಟಿದ್ದ ಮೋಡ ಬುಸಬುಸನೆ ನಸುಗೆಂಪಿನ ಉಸಿರುಬಿಟ್ಟು ನಡುರಾತ್ರಿಯೆಡೆಗೆ ಚಲಿಸುತ್ತಿದ್ದ ಕಾಲವನ್ನು ಬೆಳಗಿನ ಝಾವದ ಹುಸಿಮುನಿಸೇನೋ ಎನ್ನುವಂತೆ ಹುಸಿ ತೋರುತಿತ್ತು. ಬಾನ ತುಂಬ ತಿಳಿಗೆಂಪಿನ ಮುಚ್ಚಿಗೆ ಹಾಕಿದ್ದನ್ನು ನೋಡುತ್ತಾ ಕೇಳಿದೆ.

''ಯಾಕೆ ಕಣ್ಣಲ್ಲಿ ನೀರು? ಏನಾಯಿತು?''

''ಹೊರಗೆ ಬಾನು ಧುಮುಗುಟ್ಟರೆ ನನ್ನ ಅಂತರಂಗವೂ ಧುಮುಗುಡುತ್ತದೆ. ಅಲ್ಲಿ ಸಣ್ಣಗೆ ಮಳೆಹನಿಯಾಡಿದರೆ...''

ಮಳೆ ಜೋರಾಯಿತು. ಇವಳ ಕಣ್ಣ ಹನಿಗಳು ಸೂರ ನೀರಂತೆ ಕೆಳಗಿಳಿಯತೊಡಗಿದವು. ಕಣ್ಣು ಮಳೆ ನೀರಿಗೆ ದುಃಖಿಸುವ ಸರೋವರಗಳಂತಾದವು. ಗಳಿಗೆ ಮುಂಚೆ ನಗುತ್ತ ಪ್ರೇಮಗೀತೆ ಹಾಡುತಿದ್ದಳು... ಏನಾಯಿತು?

'ಚಟೀರ್, ಚಟೀರ್' ಸದ್ದಲ್ಲಿ ಮಿಂಚು ಕಾಣಿಸಿ ಒಮ್ಮೆಲೇ ಆಕಾಶವನ್ನೇ ಬಗೆದು ಬೆಳಕಾಗಿಸಿತು. ಗುಡುಗುಡಿಸುವ ಆಕಾಶ, ಪಟಾಕಿ ಸರಮಾಲೆಗಳನ್ನು ಹಚ್ಚಿ ನೆಲದ ವರೆಗೂ ಇಳಿಬಿಟ್ಟ ಬೆಳಕಿನ ಸೀಳು ದೂರದಲ್ಲಿ ನೆಲತಾಕಿ ಎದುರಿನ ಕೆರೆ ನೀರಲ್ಲಿ ಸುರಸುರಬತ್ತಿಯಂತೆ ಚುರುಪುರನೆ ಉರಿದಂತೆನ್ನಿಸಿತು. ಹಿಂದೆಯೇ ಸಿಡಿಲಿನ ಸದ್ದು. ಗಾಜಿನ ಮನೆಯನ್ನೇ ಎತ್ತಿ ನೆಲಕ್ಕೆಹಾಕಿದಾಗ, ಫಳಾರನೆ ಒಡೆದು ಬಿದ್ದ ಸದ್ದಂತಾಯಿತು. ಮಿಂಚೊಂದೇ ಅಲ್ಲ. ಸಿಡಿಲಿನ ಆರ್ಭಟವೂ ಜತೆಯಿತ್ತು. ಸದ್ದು, ಬೆಳಕು, ತೀಕ್ಷ್ಣತೆ! ಬೆಸೆದ ರಾತ್ರಿಯಿರುಳಿನ ನಿಗೂಢತೆಯನ್ನು ಹೊರಗೇ ಬಿಟ್ಟು, ಹುಲುಮಾನವರು ನಾವೆದ್ದು ಮನೆಯೊಳಗೆ ನಡೆದು ಚಿಲುಕ ಹಾಕಿದೆವು.

ನಡುರಾತ್ರಿಯಲ್ಲಿ ಒಬ್ಬಳೆ ಇರುತ್ತೇನೆ ಎಂದು ಜತೆಗಿರಲು ಕುಣಿಯುತ್ತ ಬಂದ ಗೆಳತಿಯನ್ನು ಅಪ್ಪಿ ಬೆನ್ನು ಸವರುತ್ತ ಕೇಳಿದೆ.

''ಯಾಕೆ ಇಷ್ಟು ದುಃಖ? ಇಬ್ರೂ ಜಗಳ ಮಾಡಿಕೊಂಡ್ರಾ?'' ಇಲ್ಲ ಎಂದು ತಲೆ ಅಲುಗಿಸಿ ಎದ್ದು ಕುಳಿತು ಬಿಕ್ಕಿದಳು. ಮಗುವಿನಂತೆ ಆಲಾಪಿಸಿ ಅತ್ತಳು. ನಾನೂ ಎದ್ದು ಕುಳಿತೆ. ನಂತರ ತಲೆಯಾನಿಸಿ ಹೇಳಿದಳು.

''ಹೇಮೂ, ಏನು ಕಾರಣಕ್ಕೂ ನಾನು ಇದ್ರಲ್ಲಿ ಸಿಕ್ಕಿಬೀಳಬಾರದಿತ್ತು ಕಣೆ... ಥೇಟ್ ಹೀಗೆ...'' ಆ ದಿನ ಮಳೆ. ಹೀಗೆ ಸರಿಹೊತ್ತಿನಲ್ಲಿ ಬಂದ. ...ಕಾರು ನಿಂತ ಸದ್ದು. ನಾನು ಕೊಡೆ ಹಿಡಿದವಳೆ ಅವನೆಡೆಗೆ ಓಡಿ ಹೋದೆ. ಕೊಡೆಹಿಡಿದು ತಬ್ಬಿ ಒಳ ಬಂದಿದ್ದ.

ನಾನು ಆ ದಿನ ಮಧ್ಯಾಹ್ನದ ಊಟಕ್ಕೆ ಚೆಂದದ ಅಡುಗೆ ಮಾಡಿದ್ದೆ. ಮಧ್ಯಾಹ್ನ ಬರುತ್ತೇನೆಂದವನು ಬರಲಿಲ್ಲವೆಂದು ಅವನೊಂದಿಗೆ ಫೋನ್‌ನಲ್ಲಿ ಕಚ್ಚಾಡಿದ್ದೆ. ಅದಕ್ಕಾಗಿ, ಕೆಲಸ ಮುಗಿಸಿ ಸರಿಹೊತ್ತಿನಲ್ಲಿ ಬಂದು ಊಟ ಹಾಕು ಎಂದವನಿಗೆ ಪ್ರೀತಿಯಿಂದ ಊಟ ಬಡಿಸಿದ್ದೆ. ಉಂಡ ಅವನು ನನ್ನನ್ನು ಎಳೆದೊಯ್ದು ಎಲ್ಲಕ್ಕೂ ಉತ್ತರವೆಂಬಂತೆ ಮೀಸಲು ಮುರಿದಿದ್ದ.

ಎರಡು ವರ್ಷದ ಸೆಳೆತ ಇಬ್ಬರಲ್ಲೂ ಅಂದು ಕೊನೆ ಹಂತಕ್ಕೆ ಬಂದು ನಿಂತು ಒಂದಾಗಿತ್ತು. ನನಗೆ ನೆನಪಿದೆ! ಆ ರಾತ್ರಿ... ಎದುರು ಮನೆಯ ಬೇಲಿಯಲ್ಲಿದ್ದ ರಾತ್ರಿ ರಾಣಿಯ ಹೂವ ರಾಶಿ ಆ ಸಣ್ಣಮಳೆಯ ಉದುರಿಗೆ ಸುರಿದು ಚೆಲ್ಲಾಡಿ ರಾತ್ರಿಯ ಏಕಾಂತವನ್ನು ಪರಿಮಳದಲ್ಲಿ ಇಟ್ಟಾಡಿಸುತ್ತಿತ್ತು. ಬಾಗಿಲು ತೆಗೆದು ಹೊರಗಿನ ಗಾಳಿಗೆ ಬಂದು ಅವನ ಹೆಗಲಿಗೆ ಒರಗಿ ಕುಳಿತೆ. ಅವನು ಕಣ್ಣಮುಚ್ಚಿ ನನ್ನ ತಲೆಯ ಮೇಲೆ ತಲೆಯಿಟ್ಟು ನೆತ್ತಿ ಮೂಸಿ ಹೇಳಿದ್ದ.

''ನಾನು ಈ ಗಂಧ ಗಾಳಿಯಲ್ಲಿ, ನಿಜ, ಕರಗಿ ಹೋಗ್ತೀನಿ.'' ನಾನು ಅವನ ಅಂಗೈಗೆ ನನ್ನ ಕೈ